O.S. No.42/2016 P.W. 1 Dated :09-07-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಶ್ರೀ. ಡಿ.ಎಂ.ಕೆ. ವಕೀಲರಿಂದಃ

ನಿಪಿ-3 ರಂತೆ ರದ್ದುಪಡಿಸಲಾಗದ ಅಧಿಕಾರ ಪತ್ರ ಕಾನೂನಿನ ಚೌಕಟ್ಟಿನಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದುರುದ್ದೇಶದಿಂದ ನಾನು ರದ್ದುಪಡಿಸಲಾಗದ ಅಧಿಕಾರ ಪತ್ರ ಎಂದು ನಿಪಿ-3 ಅನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಕರಾರು ಪತ್ರ ಆಗಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ಅನ್ನು ಓದಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಆದರೆ ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪತ್ರ ಬರಹಗಾರರು ನಿಪಿ-3 ರಲ್ಲಿನ ಅಂಶಗಳನ್ನು ನನಗೆ ಓದಿ ಹೇಳಿರುವುದಿಲ್ಲ. ನಿಪಿ-3 ರಲ್ಲಿ ನಾನು ಜಮೀನನ್ನು ಅಭಿವೃದ್ಧಿಪಡಿಸಲು ಮಾತ್ರ ಅಧಿಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ಅನ್ನು ನನಗೆ ದಾವಾ ಸ್ವತ್ತಿನ ಸ್ವಾಧೀನ ನೀಡಿರುವ ಬಗ್ಗೆ ನೀಡಿರುತ್ತಾರೆ. ದಿಃ22-02-2005 ರಂದು ಕ್ರಯದ ಕರಾರು ಪತ್ರವಾಗಿರುತ್ತದೆ . ಸದರಿ ಕ್ರಯದ ಕರಾರು ಪತ್ರದಂತೆ ನಾನು ಮುಂಗಡವಾಗಿ 2 ಲಕ್ಷದ 25 ಸಾವಿರ ರೂ.ಗಳನ್ನು ನೀಡಿದ್ದೆನು. ಕ್ರಯದ ಒಟ್ಟು ಮೊಬಲಗು 2 ಲಕ್ಷದ 35 ಸಾವಿರ ರೂ.ಗಳಾಗಿರುತ್ತದೆ. ನಾನು ಮುಂಗಡ ಹಣ ನೀಡಿರುವ ಬಗ್ಗೆ ದಾಖಲಾತಿಯಲ್ಲಿ ನಮೂದಾಗಿರುತ್ತದೆ, ಅವುಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು ಪ್ರತಿವಾದಿಗಳಿಗೆ 2 ಲಕ್ಷದ 25 ಸಾವಿರ ರೂ.ಗಳ ಮುಂಗಡ ಹಣವನ್ನು ನೀಡಿರುವುದಿಲ್ಲ ಹಾಗೆಯೇ ಯಾವುದೇ ಕ್ರಯದ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ .

ಪ್ರತಿವಾದಿಗಳು ಹೆಚ್ಚುವರಿ ಹಣ ಕೇಳಿದ ಕಾರಣ 2 ನೇ ಕರಾರು ಪತ್ರವನ್ನು ದಿಃ 13-12-2006 ರಂದು ತಯಾರಿಸಿರುತ್ತಾರೆ. 2 ನೇ ಕ್ರಯದ ಕರಾರು ಪತ್ರದಂತೆ ಹೆಚ್ಚುವರಿಯಾಗಿ ರೂ. 2 ಲಕ್ಷದ 50 ಸಾವಿರ ರೂ.ಗಳಾಗಿರುತ್ತದೆ. ಅದರಂತೆ ದಾವಾ ಸ್ವತ್ತಿನ ಒಟ್ಟು ಕ್ರಯದ ಮೊಬಲಗು 4 ಲಕ್ಷದ 85 ಸಾವಿರ ರೂ.ಗಳಾಗಿರುತ್ತದೆ. ಅದರಂತೆ ತದನಂತರದಲ್ಲಿ ಹೆಚ್ಚುವರಿಯಾಗಿ 2 ಲಕ್ಷದ 50 ಸಾವಿರ ರೂ.ಗಳನ್ನು 1

ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣವಾಗಿ ನೀಡಿರುತ್ತೇನೆ. ಮೊದಲನೇ ಬಾರಿಗೆ ವಾಸುದೇವ್ ವಕೀಲರ ಕಚೇರಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣವನ್ನು ನೀಡಿದೆನು. 2 ನೇ ಬಾರಿಗೆ ಆಲೂರಿನ ಮಧು , ವಕೀಲರು ಇವರ ಕಚೇರಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗೆ ಮುಂಗಡ ಹಣವನ್ನು ನೀಡಿದೆನು. 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಚೆಕ್ ಮುಖಾಂತರ ಮುಂಗಡ ಹಣವನ್ನು ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನನ್ನಲ್ಲಿ ಚೆಕ್ ಇಲ್ಲದ ಕಾರಣ ನಗದಾಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

10 ವರ್ಷಗಳಿಂದ ನಾನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಆಲೂರು ಶಾಖೆಯ ಖಾತೆದಾರನಾಗಿರುತ್ತೇನೆ. ಬ್ಯಾಂಕಿನಲ್ಲಿ ಡಚೆಕ್ ಪುಸ್ತಕ ಪಡೆದುಕೊಳ್ಳಬಹುದಿತ್ತು ಎಂದರೆ ಸಾಕ್ಷಿಯು ನನಗೆ ಬ್ಯಾಂಕಿನ ವ್ಯವಹಾರ ಅಷ್ಟಾಗಿ ತಿಳಿದಿಲ್ಲವಾದ ಕಾರಣ ನಾನು ಚೆಕ್ ಪುಸ್ತಕವನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ ಮುಖಾಂತರ ಅಥವಾ ನಗದು ಮುಖಾಂತರ 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣವನ್ನು ನೀಡುವ ಬಗ್ಗೆ ನಿಮ್ಮ ವಕೀಲರ ಸಲಹೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಆ ರೀತಿಯ ಸಲಹೆಯನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮೊದಲನೇ ಬಾರಿಗೆ ಮುಂಗಡ ಹಣ ನೀಡುವಾಗ ವಕೀಲರ ಕಚೇರಿಯಲ್ಲಿ ಯಾರೂ ಸಾಕ್ಷಿದಾರರು ಇರಲಿಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣ ನೀಡದ ಕಾರಣ ಸಾಕ್ಷಿದಾರರು ಇರಲಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ವಾಸುದೇವ್ ವಕೀಲರ ಕಚೇರಿಯಲ್ಲಿ ಯಾವುದೇ ಕ್ರಯದ ಕರಾರು ತಯಾರಾಗಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಆಲೂರಿನ ಮಧು ಎಂಬ ವಕೀಲರ ಕಚೇರಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣ ನೀಡುವ ವೇಳೆಯಲ್ಲಿ ಪರಮೇಶ್ ಮತ್ತು ಕಾಂತರಾಜ್ ಎಂಬ ಸಾಕ್ಷಿದಾರರು ಹಾಜರಿದ್ದರು. ಪರಮೇಶ್ ರವರು ತುರುಗನಹಳ್ಳಿಯವರಾಗಿದ್ದು , ಅವರ ತಂದೆಯ ಹೆಸರು ತಿರುಮಲೇಗೌಡ . ಕಾಂತರಾಜ್ ರವರು ಬೈರಾಪುರ ಗ್ರಾಮದವರಾಗಿದ್ದು , ಅವರ ತಂದೆ ಹೆಸರು ರಾಜೇಗೌಡ . ಮೇಲ್ಕಂಡ ಸಾಕ್ಷಿದಾರರು ನನಗೆ ಸುಮಾರು 20 ವರ್ಷಗಳಿಂದ ಪರಿಚಯವಿರುತ್ತಾರೆ,

ಅವರು ಈಗಲೂ ಬದುಕಿರುತ್ತಾರೆ. ಸಾಕ್ಷಿದಾರರು ನನಗೆ ಸುಮಾರು ವರ್ಷಗಳಿಂದ ಪರಿಚಯವಿದ್ದ ಕಾರಣ 1 ಮತ್ತು 2 ನೇ ಪ್ರತಿವಾದಿಗಳಿಗೆ ಮುಂಗಡ ಹಣವನ್ನು ಪಾವತಿ ಮಾಡದಿದ್ದರೂ ಸಹ ಸುಳ್ಳು ಕ್ರಯದ ಕರಾರು ಪತ್ರಕ್ಕೆಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2005 ನೇ ಸಾಲಿನ ಅಧಿಕಾರ ಪತ್ರಕ್ಕೆಯಾರೂ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. 2006 ನೇ ಸಾಲಿನ ಅಧಿಕಾರ ಪತ್ರಕ್ಕೆಸಾಕ್ಷಿದಾರರು ಸಹಿ ಮಾಡಿರುತ್ತಾರೆ . ಕ್ರಯದ ಕರಾರು ಪತ್ರವನ್ನು ಟೈಪಿಂಗ್ ಮುಖಾಂತರ ತಯಾರಿಸಿರುತ್ತಾರೆ . ಯಾರು ಕ್ರಯದ ಕರಾರು ಪತ್ರವನ್ನು ಟೈಪ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾಸುದೇವ್ ವಕೀಲರ ಕಚೇರಿಯಲ್ಲಿ ಅದನ್ನು ಟೈಪ್ ಮಾಡಿರುತ್ತಾರೆ. ಕರಾರು ಪತ್ರವನ್ನು ಟೈಪ್ ಮಾಡುವಾಗ ನಾನು ವಕೀಲರ ಕಚೇರಿಯಲ್ಲಿಯೇ ಹಾಜರಿದ್ದೆನು. ವಾಸುದೇವ್ ವಕೀಲರೇ ಟೈಪ್ ಮಾಡಿರುತ್ತಾರೆ. ನಿಪಿ-4 ರಲ್ಲಿ ಒಂದು ಸಾಲಿನಿಂದ ಮತ್ತೊಂದು ಸಾಲಿಗೆ ವ್ಯತ್ಯಾಸವಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ಯಾವುದೇ ವ್ಯತ್ಯಾಸ ಕಂಡುಬರುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಪರಮೇಶ್ ಎಂಬುವವರು ಅಂಗ್ಲಭಾಷೆಯಲ್ಲಿ ಸಹಿ ಮಾಡಿದ್ದು , ಇತರೆ ವಿಷಯಗಳನ್ನು ಬೇರೆ ಶಾಯಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಅದೇ ದಿನ ಎಲ್ಲವನ್ನೂ ಬರೆದು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪರಮೇಶ್ ರವರೇ ಅವರ ತಂದೆಯ ಹೆಸರನ್ನು ಬರೆದಿರುತ್ತಾರೆ. ಆ ದಿನ ಪರಮೇಶ್ ಹಾಗೂ ಕಾಂತರಾಜ್ ರವರು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಹೆಬ್ಬೆರಳಿನ ಗುರುತಿದ್ದು, ಅದು ಯಾರದು ಎಂದು ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ಈರಪ್ಪ ಎಂದು ನಮೂದಾಗಿರುತ್ತದೆ , ಅದು ಯಾರ ಸಹಿ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ವೀರಪ್ಪನ ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ತನ್ನ ಸಹಿಯನ್ನು ಈರಪ್ಪ ಎಂದು ಹಾಕುವಾಗ ನಾನು ಸ್ಥಳದಲ್ಲಿಯೇ ಇದ್ದೆನು. ಆ ವೇಳೆಯಲ್ಲಿ ನಾನು 1 ನೇ ಪ್ರತಿವಾದಿಯನ್ನು ಅವರ ಸಹಿಯ ಬಗ್ಗೆ ಪ್ರಶ್ನಿಸಿರುವುದಿಲ್ಲ. ಅದನ್ನು ಪ್ರಶ್ನಿಸಲು ನನಗೆ ತೊಂದರೆ ಇರಲಿಲ್ಲ. 1 ನೇ ಪ್ರತಿವಾದಿಯು ತನ್ನ ಸಹಿಯನ್ನು ಈರಪ್ಪ ಎಂದು ಸಹಿ ಮಾಡಿರುವ ಬಗ್ಗೆ ವಾದಪತ್ರದಲ್ಲಿ ತಿಳಿಸಿರುತ್ತೇನೆ. ವಾದಪತ್ರದಲ್ಲಿ ಆ ರೀತಿ ನಾನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ .

ದಿ:22-02-2005 ರ ಕ್ರಯಪತ್ರವನ್ನು ರದ್ದುಪಡಿಸಿಕೊಂಡಿರುತ್ತೇವೆ ಎಂದು ನಮೂದಿಸಿದ್ದು , ಯಾವ ರೀತಿ ರದ್ದುಪಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಬೇರೆ ಪತ್ರವನ್ನು ತಯಾರು ಮಾಡಿಕೊಳ್ಳುವ ಮುಖಾಂತರ ಆ ಪತ್ರವನ್ನು ತಯಾರು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಮಧು ವಕೀಲರ ಬಳಿ ರದ್ದುಪಡಿಸಿರುತ್ತೇವೆ . ಆ ರೀತಿ ರದ್ದುಪಡಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿಯ ರದ್ದುಪಡಿಯಾದಂತಹ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.